**ದಿನಾಂಕಃ  03.04.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ –**

ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯಲ್ಲಿ ನಾನು 2005 ರಿಂದಲೂ ಕೆಲಸ ಮಾಡುತ್ತಿದ್ದೇನೆ. ನಾನು ಚಾಲಕ ಮತ್ತು ನಿರ್ವಾಹಕನಾಗಿ ಕರ್ತವ್ಯ ನಿರ್ವಹಿಸಿಕೊಂಡು ಬಂದಿರುತ್ತೇನೆ. ರಾಜ್ಯ ಹೆದ್ದಾರಿಗಳಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ನಾನು ನೇಮಕಕೊಂಡಾಗ ನನ್ನ ತಿಂಗಳ ಸಂಬಳ ರೂ.2400/- ಇತ್ತು. ಈಗ ನನ್ನ ತಿಂಗಳ ಸಂಬಳ ರೂ.24,900/- ಆಗಿರುತ್ತದೆ. ಈ ಕರ್ತವ್ಯದ ಅವಧಿಯಲ್ಲಿ ನಾನು ಎರಡು ಬಾರಿ ಅಮಾನತ್ತುಗೊಂಡಿರುತ್ತೇನೆ. ಟಿಕೇಟ್ ಕೇಸುಗಳಲ್ಲಿ ಎರಡು ಬಾರಿ ಅಮಾನತ್ತು ಗೊಂಡಿದ್ದೆ. ಟಿಕೇಟ್ Issue ಮಾಡಿರುತ್ತಿದ್ದೆ . ಆದರೆ ಚೆಕ್ಕಿಂಗ್ ನವರು ಬಂದಾಗ ಪ್ರಯಾಣಿಕರು ಟಿಕೇಟ್ ನ್ನು ತೋರಿಸಿರುವುದಿಲ್ಲ. ನಾನು ಅಮಾನತ್ತುಗೊಂಡಾಗ ಟಿಕೇಟ್ ನೀಡಿರುವ ಲೆಕ್ಕಾಚಾರವನ್ನು ಸರಿಯಾಗಿ ತೋರಿಸಿರಲಿಲ್ಲ ಎನ್ನುವುದು ಸರಿಯಲ್ಲ.

2. ಈ ಘಟನೆ ನಡೆದಾಗ ನಾನು ಅಮಾನತ್ತಿನಲ್ಲಿದ್ದೆ ಎನ್ನುವುದು ಸರಿ. ಆಗಲೂ ಸಹ ನಾನು ಟಿಕೆಟ್ ಗಳನ್ನು ಪ್ರಯಾಣಿಕರಿಗೆ ನೀಡಿದ ಬಗ್ಗೆ ಸರಿಯಾದ ಲೆಕ್ಕವನ್ನು ನೀಡಿರದೇ ಇದ್ದುದ್ದರಿಂದ ಅಮಾನತ್ತು ಪಡಿಸಿದ್ದರು ಎನ್ನುವುದು ಸರಿಯಲ್ಲ. ಎಸಿಬಿ ಪೋಲೀಸರು ಆರೋಪಿಯನ್ನು ಟ್ರಾಪ್ ಮಾಡಿದ ಒಂದು ತಿಂಗಳ ಮುಂಚೆ ನಾನು ಕರ್ತವ್ಯದಿಂದ ಅಮಾನತ್ತುಗೊಂಡಿದ್ದೆ. ದಿಃ 27.04.2019 ರಂದು ನೀವು ನಿಮ್ಮ ಮಾನಸಿಕ ಸ್ಥಿತಿ ಸರಿ

ಇರುವುದು ಇಲ್ಲ ಎಂದು ಸದರಿ ಘಟಕದಿಂದ ಬೇರೆ ಘಟಕಕ್ಕೆ ವರ್ಗಾವಣೆಯನ್ನು ಕೋರಿದ್ದಿರಿ ಎಂದು ಮಾಡಿದ ಸಲಹೆಗೆ ಸಾಕ್ಷಿ , ನನ್ನ ದೈಹಿಕ ಆರೋಗ್ಯ ಸರಿ ಇಲ್ಲದೇ ಇದ್ದುದ್ದರಿಂದ ಮತ್ತು ಬದಲಿ ಹುದ್ದೆಯನ್ನು ನೀಡಬೇಕೆಂದು ಕೋರಿದ್ದೆ ಎನ್ನುತ್ತಾರೆ. ನಾನು 27.04.2019 ರಂದು ನೀಡಿದ್ದ ಪತ್ರದಲ್ಲಿ , "ಅಂಗವಿಕಲ ವ್ಯಕ್ತಿಗಳ ಕಾಯಿಲೆ 1995 ಅಡಿ ತಿಳಿಸಲಾದ ಕಾಯಿಲೆಗಳು ಎಂದು ತಿಳಿಸಿರುವ ಕಾಲಯಿಲೆಯಾದ Locomotor and Mental Disability due to week immune system in the body ಇಂದ ಬಳಲುತ್ತಿದ್ದೇನೆ " ಎಂದು ತಿಳಿಸಿರುತ್ತೇನೆ ಎನ್ನುವುದು ಸರಿ.

3. ದಿಃ 14.06.2019 ರಂದು ನೀವು ಮೈಸೂರಿನ ಗೋಪಾಲಗೌಡ ಮೆಮೋರಿಯಲ್ಲಿ ಆಸ್ಪತ್ರೆಯಲ್ಲಿ "History of tablet consumption on 14.06.2016 around 07.30am." ಗಾಗಿ ಚಿಕಿತ್ಸೆಯನ್ನು ಪಡೆದಿರುತ್ತೀರಿ ಎಂದು ಮಾಡಿದ ಸಲಹೆಗೆ ಸಾಕ್ಷಿ , " ಹೌದು " ಎನ್ನುತ್ತಾರೆ. ನೀವು ಯಾವ ಕಾರಣಕ್ಕಾಗಿ ಮಾತ್ರೆಗಳನ್ನು ಸೇವಿಸಿದ್ದಿರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ , ಪ್ರಯಾಣಿಕರಿಗೆ ಟಿಕೇಟ್ ನೀಡಿರುವುದಿಲ್ಲ ಎಂದು ಸುಳ್ಳು ಪ್ರಕರಣವನ್ನು ದಾಖಲಿಸಿದ್ದರಿಂದ ನಾನು ಮಾತ್ರೆಗಳನ್ನು ಸೇವಿಸಿದ್ದೆ ಎನ್ನುತ್ತಾರೆ. ಈ ರೀತಿಯಲ್ಲಿ ನಾನು ನನ್ನ ಮೇಲೆ ಆಪಾದನೆಗಳು ಬಂದಾಗ ಅಧಿಕಾರಿಗಳನ್ನು ಹೆದರಿಸುತ್ತಿದ್ದೆ ಎನ್ನುವುದು ಸರಿಯಲ್ಲ.

4. ಈ ಪ್ರಕರಣ ನಡೆದ ಸಂಧರ್ಬದಲ್ಲಿ ನಾನು ಅಮಾನತ್ತುಗೊಂಡಿದ್ದರಿಂದ ಮನೆಯಲ್ಲಿರುತ್ತಿದ್ದೆ. 2011 ನೇ ಸಾಲಿನಲ್ಲಿ ನನ್ನ ತಿಂಗಳ ಸಂಬಳ ರೂ.11,200/- ಇತ್ತು. 2019 ರಲ್ಲಿ ನನ್ನ ತಿಂಗಳ ಸಂಬಳ ರೂ.12,400/- ಆಗಿತ್ತು. 2011 ರಿಂದ 2019 ರ ವರೆಗೆ

ನನ್ನ ಬಾಕಿ ಸಂಬಳ ಮತ್ತು ಇಂಕ್ರಿಮೆಂಟ್ ಸೇರಿ ಒಟ್ಟು ರೂ.1,11,606/- ಬರಬೇಕಾಗಿತ್ತು. ಇಷ್ಟು ಬಾಕಿ ಬರಬೇಕು ಎಂದು ನಾನು ಅರ್ಜಿಯನ್ನೇನು ಕೊಟ್ಟಿರಲಿಲ್ಲ. ಅವರೇ ಅದನ್ನು ಮಾಡಿಕೊಡಬೇಕಾಗಿತ್ತು. ದಿಃ 10.07.2019 ರಂದು ನಾನು ಪೋಲೀಸ್ ಉಪಾಧೀಕ್ಷಕರು, ಎಸಿಬಿ , ಮೈಸೂರು ರವರಿಗೆ ಪತ್ರಿಸಿ , ನನಗೆ ಬಾಕಿ ಸಂಬಳ ಮತ್ತು ಇಂಕ್ರಿಮೆಂಟ್ ನ್ನು ಕೊಡಲು ಇರುತ್ತದೆ ಎಂದು ತಿಳಿಸಿರುತ್ತೇನೆ ಎನ್ನುವುದು ಸರಿ. ಸದರಿ ಬಿಲ್ಲನ್ನು ಮಾಡಲು ಆರೋಪಿ ಪ್ರಯಾಣಕರಿಗೆ ಟಿಕೇಟ್ ಗಳನ್ನು ನೀಡಿದ ಬಾಬ್ತು ಲೆಕ್ಕಾಚಾರ ಮತ್ತು ಬೇರೆ ಘಟಕದಲ್ಲಿ ಕೆಲಸ ಮಾಡಿದ ಬಾಬ್ತು ಹಾಜರಾತಿ ದಾಖಲಾತಿ ನೀಡಬೇಕೆಂದು ಕೇಳಿದ್ದರು ಎನ್ನುವುದು ಸರಿಯಲ್ಲ. ನಾನು ಈ ಬಗ್ಗೆ ವಿವರವನ್ನು ನೀಡಿರದೇ ಇದ್ದುದ್ದರಿಂದ ಆರೋಪಿ ಚೆಕ್ಕನ್ನು ನೀಡಿರಲಿಲ್ಲ ಎನ್ನುವುದು ಸರಿಯಲ್ಲ. ಶಿಸ್ತು ಪಾಲನಾ ಅಧಿಕಾರಿಗಳು ಮಾಡಿದ್ದ ಷರತ್ತುಗಳನ್ನು ನಾನು ಪಾಲನೆ ಮಾಡಿದ್ದೆ. ಶಿಸ್ತು ಪಾಲನಾ ಅಧಿಕಾರಿಗಳು ಹಾಕಿದ್ದಂತಹ ಷರತ್ತುಗಳನ್ನು ನಾನು ಪಾಲಿಸಿರಲಿಲ್ಲ ಎನ್ನುವುದು ಸರಿಯಲ್ಲ. ನಾನು ಅಮಾನತ್ತುಗೂಂಡಾಗ ಬೇರೆ ಎಲ್ಲಿಯೂ ಕೆಲಸ ಮಾಡುತ್ತಿರಲಿಲ್ಲ, ಮನೆಯಲ್ಲೇ ಇದ್ದೆ ಎನ್ನುವ ಬಗ್ಗೆ ಘೋಷಣಾ ಪತ್ರವನ್ನು ಘಟಕ ವ್ಯವಸ್ಥಾಪಕರಿಗೆ ನೀಡಿರಲಿಲ್ಲ ಎನ್ನುವುದು ಸರಿಯಲ್ಲ.

5. ನನ್ನ ತಿಂಗಳ ಸಂಬಳವನ್ನು ನನ್ನ ಬ್ಯಾಂಕ್ ಖಾತೆಗೆ ಟಕ ವ್ಯವಸ್ಥಾಪಕರು ವರ್ಗಾಯಿಸುತ್ತಿದ್ದರು.ಸದರಿ ಘಟಕದಲ್ಲಿ ಆರೋಪಿ ಸೂಪರ್ ವೈಸರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ನಾನು ಹಲವಾರು ಬಾರಿ ಹೋಗಿ ಆರೋಪಿಯಲ್ಲಿ ನನಗೆ ಬರಬೇಕಾಗಿದ್ದ ಬಾಕಿ ಹಣದ ಬಾಬ್ತು ಬಿಲ್ಲನ್ನು ತಯಾರಿಸುವಂತೆ ಕೋರಿದ್ದೆ. ಈ ಘಟನೆ ನಡೆದ ಎರಡು ತಿಂಗಳ ಹಿಂದೆ ನಾನು ಯಾವ ದಿನಾಂಕದಂದು ಹೋಗಿ ಅವರನ್ನು ಭೇಟಿ ಮಾಡಿದ್ದೆ ಎನ್ನುವುದು ನನಗೆ

ಈಗ ನೆನಪಿಲ್ಲ. ನನಗೆ ಬರಬೇಕಾಗಿದ್ದ ಬಾಕಿ ಪಾವತಿ ಹಣದ ಬಾಬ್ತು ಆರೋಪಿ ಮೇ ತಿಂಗಳಿನಲ್ಲೇ ಲೆಕ್ಕಾಚಾರ ಮಾಡಿ ಇಟ್ಟಿದ್ದರು ಎಂದು ಮಾಡಿದ ಸಲಹೆಗೆ ಸಾಕ್ಷಿ , "ಇಟ್ಟಿದ್ದರು, ನನಗೆ ತಿಳಿಸಿರಲಿಲ್ಲ ಮತ್ತು ನನಗೆ ಹಣವನ್ನು ಪಾವತಿ ಮಾಡಿರಲಿಲ್ಲ " ಎನ್ನುತ್ತಾರೆ. ನಾನು ಯಾವ ಘಟಕದಲ್ಲೂ ಕೆಲಸ ಮಾಡಿರಲಿಲ್ಲ ಎಂದು ನೀಡಬೇಕಾಗಿದ್ದ ಘೋಷಣೇ ಪತ್ರವನ್ನು ನೀಡದೇ ಇದ್ದುದ್ದರಿಂದ , ಅಲ್ಲದೆ ಟಿಕೇಟ್ ನ ಲೆಕ್ಕಾಚಾರವನ್ನು ನೀಡದೇ ಇದ್ದುದ್ದರಿಂದ, ಆರೋಪಿ ಚೆಕ್ಕನ್ನು ನನಗೆ ನೀಡಿರಲಿಲ್ಲ ಎನ್ನುವುದು ಸರಿಯಲ್ಲ. ನಾನು ಆರೋಪಿಯಲ್ಲಿ ಚೆಕ್ಕ ಮೂಲಕ ಹಣವನ್ನು ನನ್ನ ಖಾತೆಗೆ ಜಮಾ ಮಾಡುವುದು ಬೇಡ, ಚೆಕ್ಕನ್ನು ಖುದ್ದು ನನಗೆ ಹಸ್ತಾಂತರಿಸಿ ಎಂದೂ ಸಹ ಕೇಳಿಕೊಂಡಿದ್ದೆ ಎನ್ನುವುದು ಸರಿಯಲ್ಲ.

6. ನನ್ನ ಹೆಂಡತಿಯ ಹೆಸರು ಆರತಿ. ಒಬ್ಬ ಮಗಳು, ಅವಳ ಹೆಸರು ನಿಸರ್ಗ. ಅವರಿಬ್ಬರು ಚಿಕ್ಕಮಗಳೂರಿನ 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಹೆಚ್ಚಿನ ಜೀವನಾಂಶವನ್ನು ಕೋರಿ ನನ್ನ ವಿರುದ್ಧ. Crl.RP No. 47/2016 ರನ್ನು ಹೂಡಿದ್ದರು ಎನ್ನುವುದು ಸರಿ. ಅದರಲ್ಲಿ ಮಾನ್ಯ ನ್ಯಾಯಾಲಯ ನನ್ನ ಹೆಂಡತಿಗೆ ತಿಂಗಳಿಗೆ ರೂ.5000/– ಹಾಗೂ ಮಗಳು ವಯಸ್ಕಳಾಗುವವರೆಗೂ ತಿಂಗಳಿಗೆ ರೂ.2500/– ಕೊಡಬೇಕು ಎಂದು ಆದೇಶಿಸಿರುತ್ತದೆ ಎಂದು ಮಾಡಿದ ಸಲಹೆಗೆ ಸಾಕ್ಷಿ , ಸದರಿ ಆದೇಶದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎನ್ನುತ್ತಾರೆ. ನಂತರದಲ್ಲಿ ನನ್ನ ಸಂಬಳದಲ್ಲಿ ಸದರಿ ಹಣವನ್ನು ಕೊಡಬೇಕು ಎಂದು ನ್ಯಾಯಾಲಯ Attachment order ನೀಡಿತ್ತು ಎಂದು ಮಾಡಿದ ಸಲಹೆಗೆ ಸಾಕ್ಷಿ , ನನ್ನ ಸಂಬಳದಿಂದ ಜೀವನಾಂಶವನ್ನು ಕಡಿತಗೊಳಿಸಿರುವುದಿಲ್ಲ ಎನ್ನುತ್ತಾರೆ. ಸದರಿ ಜೀವನಾಂಶವನ್ನು ದಿಃ 06.06.2015 ರಿಂದ ಕೊಡಬೇಕು ಎಂದು ಆದೇಶವಾಗಿರುತ್ತದೆ

ಎನ್ನುವುದು ನನಗೆ ಗೊತ್ತಿಲ್ಲ. ಹೆಂಡತಿ ಮಗಳಿಗೆ ಜೀವನಾಂಶ ಹಣವನ್ನು ಕೊಡಬೇಕಾಗುತ್ತದೆ ಎನ್ನುವ ಕಾರಣದಿಂದ ನಾನು ನನಗೆ ಬಾಕಿ ಬರಬೇಕಾಗಿದ್ದ ಹಣದ ಚೆಕ್ಕನ್ನು ಖುದ್ದು ಕೊಡಿ, ನನ್ನ ಬ್ಯಾಂಕಿನ ಖಾತೆಗೆ ಹಣವನ್ನು ಜಮಾಯಿಸಬೇಡಿ ಎಂದು ಆರೋಪಿಯಲ್ಲಿ ಒತ್ತಾಯ ಮಾಡಿದ್ದೆ ಎನ್ನುವುದು ಸರಿಯಲ್ಲ. ಅದಕ್ಕೆ ಆರೋಪಿ ಒಪ್ಪಿರಲಿಲ್ಲ ಎನ್ನುವುದು ಸರಿಯಲ್ಲ. ಆ ರೀತಿ ಆರೋಪಿ ಒಪ್ಪದೇ ಇದ್ದುದ್ದರಿಂದ ನಾನು ಆರೋಪಿಯನ್ನು ಸುಳ್ಳು ಲಂಚದ ಪ್ರಕರಣದಲ್ಲಿ ಸಿಲುಕಿಸಿರುತ್ತೇನೆ ಎನ್ನುವುದು ಸರಿಯಲ್ಲ.

7. ದಿಃ 10.07.2019 ರಂದು ನಾನು ಆರೋಪಿಯನ್ನು ನಮ್ಮ ಘಟಕದ ಎದುರಿನಲ್ಲಿರುವ ಬಾರ್ಗವಾ ಹೊಟೆಲ್ ನಲ್ಲಿ ಬಂದು ಭೇಟಿ ಮಾಡು ಎಂದು ಹೇಳಿದ್ದರಿಂದ ಅಲ್ಲಿ ಆರೋಪಿಯನ್ನು ಭೇಟಿ ಮಾಡಿದ್ದೆ. ಅಲ್ಲಿ ನಾನು ಆತನನ್ನು ಭೇಟಿ ಮಾಡಿದಾಗ ನನ್ನ ಜೊತೆ ಪಂಚ ಸಾಕ್ಷಿ 2 ಇದ್ದರು. ಪಂಚ ಸಾಕ್ಷಿ 2 ಸದರಿ ಹೊಟೆಲ್ ನ ಬಾಗಿಲ ಬಳಿ ನಿಂತಿದ್ದರು. ಪಂಚ ಸಾಕ್ಷಿ 2 ರವರು ನಿಂತಿದ್ದ ಸ್ಥಳದಿಂದ 5 ಅಡಿ ದೂರದಲ್ಲಿ ನಾನು ಮತ್ತು ಆರೋಪಿ ಕುಳಿತಿದ್ದೆವು. ನಮ್ಮ ಅಕ್ಕ ಪಕ್ಕದಲ್ಲಿ ಹೊಟೆಲ್ ಗೆ ಬಂದಿದ್ದ ಗ್ರಾಹಕರು ಇದ್ದರು. ಗ್ರಾಹಕರು ಅವರವರ ಟೇಬಲ್ ನಲ್ಲಿ ಮಾತನಾಡಿಕೊಳ್ಳುತ್ತಿದ್ದರು. ಹೀಗಾಗಿ ನಾನು ಮತ್ತು ಆರೋಪಿ ಮಾತನಾಡುತ್ತಿದ್ದುದ್ದ ಪಂಚ ಸಾಕ್ಷಿ 2 ರವರಿಗೆ ಕೇಳಿಸಿರುವುದಿಲ್ಲ ಎನ್ನುವುದು ಸರಿಯಲ್ಲ . ಆ ಹೊಟೆಲ್ ಮುಖ್ಯ ರಸ್ತೆಯಲ್ಲಿ ಇದೆ ಎನ್ನುವುದು ಸರಿಯಲ್ಲ. ಸರ್ವೀಸ್ ರಸ್ತೆಯಲ್ಲಿ ಇದೆ. ಅಲ್ಲಿ ವಾಹನಗಳು ಹೆಚ್ಚು ಓಡಾಡುತ್ತವೆ ಎನ್ನುವುದು ಸರಿಯಲ್ಲ. ಹೀಗಾಗಿ ನನ್ನ ಮತ್ತು ಆರೋಪಿಯ ನಡುವೆ ನಡೆದ ಮಾತುಕತೆ ಪಂಚ ಸಾಕ್ಷಿ 2 ರವರಿಗೆ ಕೇಳಿಸಿರುವುದಿಲ್ಲ ಎನ್ನುವುದು ಸರಿಯಲ್ಲ. ಆ ಹೊಟೆಲ್ ನಲ್ಲಿ 10-15 ನಿಮಿಷ ನಾವು ಇದ್ದಿರಬಹುದು. ಆರೋಪಿ ಮಂಜುನಾಥ ರವರ

ಕೈಯಲ್ಲಿ ಏನಾದರು ಇತ್ತೂ ಇಲ್ಲವೂೀ ಎನ್ನುವುದನ್ನು ನಾನು ಗಮನಿಸಿರುವುದಿಲ್ಲ. ನನ್ನ ಬಳಿಯಲ್ಲಿ ಅಮಾನತ್ತಿನ ಅವಧಿಯ ಅರ್ದ ಸಂಬಳವನ್ನು ಕೋರಿ ಬರೆದ ಪತ್ರ , ನಗದು ಹಣ್ಣ ಇದ್ದವು. ಹಣ ನನ್ನ ಶರ್ಟ ನ ಎಡ ಭಾಗದ ಜೇಬಿನಲ್ಲಿತ್ತು. ನಾನು ಶರ್ಟ ಜೇಬಿನಿಂದ ಹಣವನ್ನು ತೆಗೆದು ಆರೋಪಿಗೆ ಕೊಟ್ಟೆ. ಆರೋಪಿ ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟಿರಲಿಲ್ಲ ಎನ್ನುವುದು ಸರಿಯಲ್ಲ. ನಾನು ಹಣವನ್ನು ಬಲವಂತವಾಗಿ ಆರೋಪಿಯ ಕೈಗೆ ನೀಡಿದೆ ಎನ್ನುವುದು ಸರಿಯಲ್ಲ. ಆರೋಪಿಯ ಬಳಿಯಲ್ಲಿ ನನಗೆ ಬರಬೇಕಾಗಿದ್ದಂತಹ ಬಾಕಿ ಹಣದ ಬಾಬ್ತು ಕೆಲಸ ಬಾಕಿ ರಲಿಲ್ಲ ಎನ್ನುವುದು ಸರಿಯಲ್ಲ.

8. ಆರೋಪಿಯನ್ನು ಎಸಿಬಿ ಪೋಲೀಸರು ವಶಕ್ಕೆ ಪಡೆದುಕೊಂಡ ನಂತರ ನಮ್ಮ ಘಟಕಕ್ಕೆ ಎಲ್ಲರೂ ಹೋದೆವು. ನನಗೆ ಸಂಬಂಧಪಟ್ಟ ಕಡತ ವಿಭಾಗೀಯ ಕಛೇರಿಯಲ್ಲಿ ಇತ್ತು. ಆದರೆ ನನ್ನ ಚೆಕ್ಕ ಆ ಘಟಕದಲ್ಲೇ ಇತ್ತು. ಆ ಚೆಕ್ಕನ್ನು ಘಟಕ ವ್ಯವಸ್ಥಾಪಕರು , ಸುಲೈಮಾನ್ ಪಾಷ , ಜೂನಿಯರ್ ಅಸ್ಸಿಸ್ಟೆಂಟ್ , ಅವರಿಂದ ತರಿಸಿ ತನಿಖಾಧಿಕಾರಿಗೆ ಕೊಟ್ಟರು. ಆರೋಪಿಗೂ ಮತ್ತು ಚೆಕ್ಕನ್ನು ನನ್ನ ಖಾತೆಗೆ ಜಮಾ ಮಾಡುವ ಕೆಲಸಕ್ಕೊ ಯಾವುಕೇ ರೀತಿಯ ಸಂಬಂಧ ಇರಲಿಲ್ಲ ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ, ಅರೋಪಿಯೇ ಕಚೆಕ್ಕನ್ನು ರೆಡಿ ಮಾಡಬೇಕಾಗಿತ್ತು ಎಂದು. ದಿಃ 07.07.2019 ರಂದೇ ನಿಮಗೆ ನೀಡಬೇಕಾಗಿದ್ದ ಚೆಕ್ಕು ರೆಡಿ ಆಗಿತ್ತು ಎಂದು ಮಾಡಿದ ಸಲಹೆಗೆ ಸಾಕ್ಷಿ , ಆ ಚೆಕ್ಕನ್ನು ನನ್ನ ಖಾತೆಗೆ ಜಮಾ ಮಾಡಿರಲಿಲ್ಲ ಎನ್ನುತ್ತಾರೆ. ಲಂಚದ ಹಣವನ್ನು ಕೊಟ್ಟರೆ ಆ ಚೆಕ್ಕನ್ನು ನನಗೆ ಕೊಡುತ್ತೇನೆ ಎಂದು ಆರೋಪಿ ತಿಳಿಸಿದ್ದರು ಎನ್ನುತ್ತಾರೆ. ಆರೋಪಿ ಲಂಚದ ಹಣವಕ್ಕೆ ಬೇಡಿಕೆ ಇಟ್ಟಿರಲಿಲೀಲ ಎನ್ನುವುದು ಸರಿಯಲ್ಲ. ಆರೋಪಿಗೆ ಚೆಕ್ಕನ್ನು ಜಮಾ ಮಾಡುವ

ಅಧಿಕಾರವಾಗಲೀ, ಚೆಕ್ಕನ್ನು ತಯಾರಿಸುವ ಅಧಿಕಾರವಾಗಲೀ ಇರಲಿಲ್ಲ ಎನ್ನುವುದು ಸರಿಯಲ್ಲ. ಈ ಕೆಲಸ ಅಲ್ಲಿಯ ಅಕೌಂಟ್ಸ್ ಮಾನೇಜರ್ ಗೆ ಸಂಬಂಧ ವಿಷಯಾಗಿತ್ತು ಎನ್ನುವುದು ನನಗೆ ಗೊತ್ತಿಲ್ಲ. ಅಧಿಕಾರಿಗಳನ್ನು ಹೆದರಿಸುವ ಉದ್ದೇಶದಿಂದ , ಸುಳ್ಳು ಪ್ರಕರಣದಲ್ಲಿ ಆರೋಪಿಯನ್ನು ಸಿಲುಕಿಸಿರುತ್ತೇನೆ ಎಂದರೆ ಸರಿಯಲ್ಲ. ನಾನೇ ಖುದು ಬಲವಂತವಾಗಿ ಆರೋಪಿಯ ಕೈಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ನಡುವೆ ನಡೆದ ಸಂಭಾಷಣೆಯಲ್ಲಿ ಆರೋಪಿ ಲಂಚದ ಹಣಕ್ಕಾಗಿ ಬೇಡಿಗೆ ಇಟ್ಟಿರುವುದೇ ಇಲ್ಲ ಎನ್ನುವುದು ಸರಿಯಲ್ಲ. ನಾನು ದೈಹಿಕ ಮತ್ತು ಮಾನಸಿಕ ಆರೋಗ್ಯದಿಂದ ವರ್ಗಾವಣೆ ಕೋರಿ ಅರ್ಜಿಯನ್ನು ಸಲ್ಲಿಸಿ ವರ್ಗಾವಣೆಯನ್ನು ಕೋರಿ ಅರ್ಜಿಯನ್ನು ಸಲ್ಲಿಸಿದ್ದರೂ ಸಹ ವರ್ಗಾವಣೆ ಆಗಿರದೇ ಇದ್ದುದ್ದರಿಂದ , ಘಟಕದಲ್ಲಿನ ಅಧಿಕಾರಿಗಳನ್ನು ಹೆದರಿಸಿ, ನನ್ನ ಅನುಕೂಲಕ್ಕೆ ಬೇಕಾಗಿರುವ ಕೆಲಸಗಳನ್ನು ಪಡೆಯುವ ಸಲುವಾಗಿ ಹಾಗೂ ನನ್ನ ಕೈಗೆ ವೇತನ ಹಾಗೂ ಬಾಕಿ ಬರಬೇಕಾಗಿದ್ದ ಹಣದ ಚೆಕ್ಕನ್ನು ಪಡೆಯುವ ಸಲುವಾಗಿ, ಈ ಒಂದು ಸುಳ್ಳು ದೂರನ್ನು ಆರೋಪಿಯ ವಿರುದ್ಧ ನೀಡಿರುತ್ತೇನೆ ಎನ್ನುವುದು ಸರಿಯಲ್ಲ.

**ಮರುವಿಚಾರಣೆಃ ಮಾನ್ಯ ವಿಶೇಷ ಪಿಪಿ ರವರಿಂದಃ**

9. ಪ್ರಸ್ತುತ ನಾನು ಚಾಮರಾಜನಗರ ವಿಭಾಗ , ನಂಜನಗೂಡು ಘಟಕದಲ್ಲಿ ಓ ಓ ಡಿ , ಟ್ರಾಫಿಕ್ ಕಂಟ್ರೋಲರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಾನು ಹೆಚ್ ಐ ವಿ ಪಾಸಿಟೀವ್ ರೋಗಿ ಆಗಿರುವುದರಿಂದ ನನ್ನ ಹೆಂಡತಿ ಮಗಳು, ಈ ವಿಷಯ ಗೊತ್ತಾದ ನಂತರ ನನ್ನನ್ನು ಬಿಟ್ಟು ಹೋದರು. ಈ ನನ್ನ ಅನಾರೋಗ್ಯದ ವಿಷಯವನ್ನು ನನ್ನ ಇಲಾಖೆಗೆ 2016 ರಲ್ಲೇ ತಿಳಿಸಿರುತ್ತೇನೆ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು.